# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2226 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26.03.2026. |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗೆ ದಾಳಿ ನಡೆಸಿ, ವಿವಿಧ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದಾಗ ಹಲವಾರು ರೀತಿಯ ನಿಷೇಧಿತ ವಸ್ತುಗಳು ವ್ಯಾಪಕವಾಗಿ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ದಿನಾಂಕ 21-02-2026 ರಂದು ಸಿ.ಸಿ.ಬಿ. ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಅನಿರೀಕ್ಷಿತವಾಗಿ ಕಾರಾಗೃಹದ ವಿವಿಧ ವಿಭಾಗಗಳನ್ನು ತಪಾಸಣೆ ನಡೆಸಿದಾಗ ನಿಷೇಧಿತ ವಸ್ತುಗಳು ದೊರೆತ ಪ್ರಕರಣದಲ್ಲಿ 26 ಜನ ಬಂದಿಗಳ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:080/2026 ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ 2022 ರ ಕಲಂ 42 ಹಾಗೂ ಭಾರತೀಯ ನ್ಯಾಯ ಸಂಹಿತ (BNS) 2023 ಕಲಂ 323 ರಡಿಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ.<br>ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದಂತೆ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ನಡೆದಿರುವ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಬಂದಿಗಳಿಗೆ ನಿಯಮ ಬಾಹಿರವಾಗಿ ನಿಷೇಧಿತ ವಸ್ತುಗಳನ್ನು ಬಳಸುತ್ತಿರುವ ಬಗ್ಗೆ, ಹಾಗೂ ಇತರೆ ಸವಲತ್ತುಗಳನ್ನು ಬಂದಿಗಳು ಪಡೆಯುತ್ತಿರುವ ಬಗ್ಗೆ, ದೃಶ್ಯಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕಳೆದ 05 ವರ್ಷಗಳಲ್ಲಿ ವರದಿ ಆಗಿರುವ ಎಲ್ಲಾ ವಿಡಿಯೋ/ಆಡಿಯೋ ತುಣುಕುಗಳ ಕುರಿತು ಹಾಗೂ ಎಲ್ಲಾ ಕೇಂದ್ರ ಕಾರಾಗೃಹಗಳ ಪರಿಶೀಲನೆ / ವಿಚಾರಣೆ ನಡೆಸಿ, ಸಮಗ್ರ ವರದಿಯನ್ನು ಸಲ್ಲಿಸಲು ರಚಿಸಲಾಗಿದ್ದ ಶ್ರೀ ಆರ್. ಹಿತೇಂದ್ರ ಭಾ.ಪೊ.ಸೇ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಕಾನೂನು ಮತ್ತು ಸುವ್ಯವಸ್ಥೆ) ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯು ವರದಿಯನ್ನು ಸಲ್ಲಿಸಿದ್ದು, ಸದರಿ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಆ) | ಬಂದಿದ್ದಲ್ಲಿ, ಜೈಲಿನ ಒಳಗಡೆ ಹಲವು ಬಾರಿ ಈ ರೀತಿಯಲ್ಲಿ ವಿವಿಧ ರೀತಿಯ ನಿಷೇಧಿತ ವಸ್ತುಗಳು ಪದೇ ಪದೇ ಕಂಡುಬರುತ್ತಿದ್ದರು ಇದರ ವಿರುದ್ಧ ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮ ವಹಿಸದಿರಲು ಕಾರಣಗಳೇನು; | |
| (ಇ) | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ಅವಿರತವಾಗಿ ನಡೆಯುತ್ತಿರುವ ಮಾಹಿತಿ ಇದ್ದರೂ, ಅದನ್ನು ತಡೆಯಲು ಮತ್ತು ಅವುಗಳಿಗೆ | • ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳು ಬಳಸದಂತೆ ಹಾಗೂ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಕಾರಾಗೃಹದ ಮುಖ್ಯ ಅಧೀಕ್ಷಕರ ಹುದ್ದೆಗೆ ಐ.ಪಿ.ಎಸ್ ಅಧಿಕಾರಿಯನ್ನು ನೇಮಿಸಲಾಗಿರುತ್ತದೆ. |

| | | |
|---|---|---|
| | ಶಾಶ್ವತವಾಗಿ ಕಡಿವಾಣ ಹಾಕಲು ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ವಿಫಲವಾಗಿರುವುದಕ್ಕೆ ಕಾರಣಗಳೇನು; | • ಬೆಂಗಳೂರು ಕೇಂದ್ರ ಕಾರಾಗೃಹದ ಭದ್ರತಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿಗಾವಹಿಸಲು AI ತಂತ್ರಜ್ಞಾನವನ್ನು ಅಳವಡಿಸಲಾಗಿರುತ್ತದೆ. ಸದರಿ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳ ಬಳಕೆ ತಡೆಗಟ್ಟಲು ಹಾಗೂ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಅತ್ಯಾಧುನಿಕ ಮಾದರಿಯ ತಪಾಸಣಾ ಉಪಕರಣಗಳು ಹಾಗೂ ಹೆಚ್ಚುವರಿಯಾಗಿ ಸಿ.ಸಿ.ಟಿ.ವಿಗಳು, ಬ್ಯಾಗೇಜ್ ಸ್ಕ್ಯಾನರ್ ಗಳನ್ನು ಒದಗಿಸಲಾಗಿರುತ್ತದೆ.<br><br>• ಬೆಂಗಳೂರು ಕೇಂದ್ರ ಕಾರಾಗೃಹ ಸೇರಿದಂತೆ ರಾಜ್ಯದ ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ವೀಕ್ಷಿಸಲು ಪ್ರಧಾನ ಕಛೇರಿಯಲ್ಲಿ Command Center ಅನ್ನು ಸ್ಥಾಪಿಸಿ, ಬಂದಿಗಳ ಮತ್ತು ಸಿಬ್ಬಂದಿಗಳ ಚಲನವಲನಗಳನ್ನು ವೀಕ್ಷಿಸಲಾಗುತ್ತಿದೆ.<br><br>• ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 05 ವರ್ಷ ಹಾಗೂ ಮೇಲ್ಪಟ್ಟು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>• ಬೆಂಗಳೂರು ಕೇಂದ್ರ ಕಾರಾಗೃಹವನ್ನು ಭದ್ರತಾ ದೃಷ್ಟಿಯಿಂದ 03 ಕೇಂದ್ರ ಕಾರಾಗೃಹಗಳನ್ನಾಗಿ 1)ಕೇಂದ್ರ ಕಾರಾಗೃಹ, ಶಿಕ್ಷಾ ಬಂದಿಗಳು, 2) ಕೇಂದ್ರ ಕಾರಾಗೃಹ, ವಿಚಾರಣಾ ಬಂದಿಗಳು ಹಾಗೂ 3) ಕೇಂದ್ರ ಕಾರಾಗೃಹ, ಮಹಿಳಾ ಬಂದಿಗಳು, ವಿಭಜಿಸಿ ಆಡಳಿತ ವಿಕೇಂದ್ರಿಕರಣ ಹಾಗೂ ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.<br><br>• ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಖಾಲಿಯಿರುವ ವೀಕ್ಷಕ ಹಾಗೂ ಜೈಲರ್ ಹುದ್ದೆಗಳನ್ನು ನೇಮಕಾತಿ ಮಾಡಲು ಕ್ರಮವಹಿಸಲಾಗಿರುತ್ತದೆ.<br><br>• ಕಾರಾಗೃಹದ ಹೊರ ಭಾಗದ ಉಸ್ತುವಾರಿ ಹೊಂದಿರುವ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆ.ಎಸ್.ಐ.ಎಸ್.ಎಫ್) ಅಧಿಕಾರಿ /ಸಿಬ್ಬಂದಿಗಳನ್ನು 06 ತಿಂಗಳಿಗೊಮ್ಮೆ ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>• ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಪೊಲೀಸ್ ಇಲಾಖಾವತಿಯಿಂದ ಅನಿರೀಕ್ಷಿತ ತಪಾಸಣೆಯನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದ್ದು, ಸದರಿ ತಪಾಸಣೆ ವೇಳೆಯಲ್ಲಿ ನಿಷೇಧಿತ ವಸ್ತುಗಳು ದೊರೆತಾಗ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ. |

| | | |
|---|---|---|
| | | • ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅಧಿಕಾರಿ/ಸಿಬ್ಬಂದಿಗಳು ದೈನಂದಿನ ಮತ್ತು ಅನಿರೀಕ್ಷಿತ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದ್ದು, ನಿಷೇಧಿತ ವಸ್ತುಗಳು ದೊರೆತಲ್ಲಿ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ. |
| (ಈ) | ಹಣದ ಆಸೆಗೆ ಜೈಲು ಅಧಿಕಾರಿಗಳೇ ಕೈದಿಗಳ ಜೊತೆ ಶಾಮೀಲಾಗಿದ್ದು, ಈ ರೀತಿಯ ಅಕ್ರಮಗಳಿಗೆ ಸಂಪೂರ್ಣವಾಗಿ ಅವರೇ ಕಾರಣರಾಗಿದ್ದು, 2024, 2025 ಮತ್ತು 2026ನೇ ವರ್ಷದಲ್ಲಿ ಅಂತಹ ಎಷ್ಟು ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಇದುವರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು). | ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾದ ವಿವರವನ್ನು **ಅನುಬಂಧದಲ್ಲಿರಿಸಿದೆ.** |

ಸಂಖ್ಯೆ: ಹೆಚ್‌ಡಿ 50 ಪಿಆರ್‌ಇ 2026

(ಸಹಿ)

**(ಡಾ. ಜಿ. ಪರಮೇಶ್ವರ)**
ಗೃಹ ಸಚಿವರು

# ಅನುಬಂಧ-1

| ಕ್ರ ಸಂ | ಆರೋಪಿತ ಅಧಿಕಾರಿ/ ಸಿಬ್ಬಂದಿಯ ವಿವರ | ವರ್ಷ/ ಎಫ್ಐಆರ್ ಸಂಖ್ಯೆ | ಪ್ರಕರಣದ ಸಂಕ್ಷಿಪ್ತ ವಿವರ |
|---|---|---|---|
| 1 | ಶ್ರೀಮತಿ ನವ್ಯಶ್ರೀ, ಸೈಕಿಯಾಟ್ರಿಕ್ ಕೌನ್ಸಿಲರ್ | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೊ.ಸಂ:0178/2025 ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 , ಬಿಎನ್‌ಎಸ್ 2023 ಕಲಂ 323 | ದಿನಾಂಕ: 13-06-2025 ರಂದು ಶ್ರೀಮತಿ ನವ್ಯಶ್ರೀ, ಸೈಕಿಯಾಟ್ರಿಕ್ ಕೌನ್ಸಿಲರ್ ಇವರು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕರ್ತವ್ಯಕ್ಕೆ ಹಾಜರಾಗುವಾಗ ನಿಷೇಧಿತ ವಸ್ತುವನ್ನು ಸರಬರಾಜು ಮಾಡಲು ಪ್ರಯತ್ನಿಸಿದ ಪ್ರಕರಣ |
| 2 | ಕಲ್ಲಪ್ಪ ಹುಬಚಿ, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ದಿನಾಂಕ:08.09.2025ರಂದು ಮೊ.ಸಂ.241 2025 ಎನ್ ಡಿ ಪಿಎಸ್ ಆಕ್ಟ್ 1985 ಕಲಂ 21(ಬಿ)ಬಿ ಎನ್ ಎಸ್ -2023 ಕಲಂ 323, ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ: **07.09.2025** ರಂದು ಕರ್ತವ್ಯಕ್ಕೆ ಹಾಜರಾಗುವಾಗ ಹ್ಯಾಶ್ ಆಯಿಲ್ ರೀತಿಯ ನಿಷೇಧಿತ ಮಾದಕ ವಸ್ತುಗಳನ್ನು ಸಾಗಿಸಲು ಪ್ರಯತ್ನಿಸಿದ ಪ್ರಕರಣ |
| 3 | ಶ್ರೀ ಅಮರ್ ಪ್ರಾಂಜ, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ದಿನಾಂಕ:08.09.2025ರಂದು ಮೊ.ಸಂ. 241/2025ಬಿ ಎನ್ ಎಸ್ -2023 ಕಲಂ 323, ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ **ದಿನಾಂಕ:23.10.2025** ರಂದು ಕರ್ತವ್ಯಕ್ಕೆ ಹಾಜರಾಗುವಾಗ ನಿಷೇಧಿತ ವಸ್ತುಗಳನ್ನು ಸಾಗಿಸಲು ಪ್ರಯತ್ನಿಸಿದ ಪ್ರಕರಣ |
| 4 | ಶ್ರೀ ರಾಹುಲ್ ಪಾಟೀಲ್, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ಮೊ.ಸಂ.0293/2025 ಬಿಎನ್‌ಎಸ್ -2023 ಕಲಂ 323.ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ:04-12-2025 ರಂದು ಕರ್ತವ್ಯಕ್ಕೆ ಹಾಜರಾಗುವಾಗ ಕೆಎಸ್‌ಐಎಸ್‌ಎಫ್ ಸಿಬ್ಬಂದಿಗಳು ತಪಾಸಣೆ ಸಮಯದಲ್ಲಿ 02 ಪ್ಯಾಕ್ ಸಿಗರೇಟ್ ಪ್ಯಾಕೇಟ್ ಮತ್ತು 60ಗ್ರಾಂ ನಿಷೇಧಿತ ರೀತಿಯ ತಳುವಾದ ಪೇಪರ್ ತರಹದ ವಸ್ತು ಕಂಡುಬಂದಿದ್ದು ಸದರಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. |
| 5 | ಶ್ರೀ ಪ್ರಕಾಶ ಗಾವಡೆ, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ಮೊ.ಸಂ.0114/2025,ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 ಮತ್ತು ಎನ್.ಡಿ.ಪಿ.ಎಸ್ ಕಾಯಿದೆ ಕಲಂ (U/s-22(b)) | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ:09-03-2026 ರಂದು ಕರ್ತವ್ಯಕ್ಕೆ ಹಾಜರಾಗುವಾಗ ಕೆಎಸ್‌ಐಎಸ್‌ಎಫ್ ಸಿಬ್ಬಂದಿಗಳು ತಪಾಸಣೆ ಸಮಯದಲ್ಲಿ ಕಾರಾಗೃಹದೊಳಗೆ ಸರಬರಾಜು ಮಾಡಲು ಅಡಗಿಸಿಟ್ಟುಕೊಂಡಿದ್ದ ನಗದು ಹಣ ಮತ್ತು ಮಾದಕ ವಸ್ತುಗಳು ದೊರೆತ ಪ್ರಕರಣ |